# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ:14.05.2020**

## ಪಾದಚಾರಿ ಮೇಲ್ಸೇತುವೆ(Skywalk) ಲೋಕಾರ್ಪಣೆ:



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾಗಪುರ ವಾರ್ಡ್ ವ್ಯಾಪ್ತಿಯ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ರಸ್ತೆ, ಇಸ್ಕಾನ್ ದೇವಸ್ಥಾನದ ಬಳಿ ಖಾಸಗಿ ಸಾರ್ವಜನಿಕ ಖಾಸಗಿ(PPP) ಮಾದರಿಯಲ್ಲಿ ನಿರ್ಮಿಸಿರುವ "ಪಾದಚಾರಿ ಮೇಲ್ಸೇತುವೆ"(Skywalk)ಯನ್ನು ಆಹಾರ ಸಚಿವ ಶ್ರೀ ಗೋಪಾಲಯ್ಯ, ಪೂಜ್ಯ ಮಹಾಪೌರರು ರವರು ಲೋಕಾರ್ಪಣೆಗೊಳಿಸಿದರು. ಈ ವೇಳೆ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಅಭಿಯಂತರರು ಶ್ರೀ ಸೋಮಶೇಖರ್, ಅಧೀಕ್ಷಕ ಅಭಿಯಂತರರು ಶ್ರೀ ಬಸವರಾಜ್ ಕಬಾಡೆ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಓಡಾಟಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ, ಅವಶ್ಯಕ ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಪೂಜ್ಯ ಮಹಾಪೌರರು ರವರು ತಿಳಿಸಿದರು.

ನಾಗಪುರ ವಾರ್ಡ್ ವ್ಯಾಪ್ತಿಯಲ್ಲಿ ಇಸ್ಕಾನ್ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸುಸಜ್ಜಿತ ಸ್ಕೈವಾಕ್ ನಿರ್ಮಿಸಿದ್ದು, ಒಮ್ಮೆ 16 ಮಂದಿಯನ್ನು ಒಯ್ಯಬಲ್ಲ 2 ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ವಿದ್ಯುತ್ ಇಲ್ಲದಾಗ ಲಿಫ್ಟ್ ಕಾರ್ಯನಿರ್ವಹಿಸಲು ಜನರೇಟರ್ ವ್ಯವಸ್ಥೆಯನ್ನು ಕೂಡ ಕಲ್ಪಿಸಲಾಗಿದೆ ಎಂದರು. ಇದೇ ವೇಳೆ ಪೌರಕಾರ್ಮಿಕರಿಗೆ ಹೈಜಿನಿಕ್ ಕಿಟ್ ವಿತರಿಸಲಾಯಿತು.

**ಹೆಚ್ಚಿನ ಮಾಹಿತಿಗಾಗಿ ಪಾದಚಾರಿ ಮೇಲ್ಸೇತುವೆಯ ಮಾಹಿತಿಯ ಪ್ರತಿಯನ್ನು ಲಗತ್ತಿಸಿದೆ.**

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**